ಮಾಡಿ ವಾರಾಸುದಾರರಿಗೆ ಅಥವಾ ಪೊಲೀಸ್‌ನವರಿಗೆ ನೀಡಲಾಗುವುದು. ಇದರಿಂದ 2–3 ದಿನಗಳು ಕಾಯಬೇಕಾದಂತಹ ಪರಿಸ್ಥಿತಿ ಇರುವುದಿಲ್ಲ.

ಇ) ಕೆ.ಸಿ.ಜಿ ಆಸ್ಪತ್ರೆಯಲ್ಲಿ ನೂತನ ಮರಣೋತ್ತರ ವಿಭಾಗವನ್ನು ನಿರ್ಮಿಸಲು ಕಟ್ಟಡದ ಅಂದಾಜು ಪಟ್ಟಿಯ ಪ್ರಸ್ತಾವನೆ ಸಲ್ಲಿಸಲು ಲೋಕೋಪಯೋಗಿ ಇಲಾಖೆಗೆ ಕೋರಲಾಗಿದೆ.

ಆಸ್ಪತ್ರೆಯಲ್ಲಿ ಹಾಲಿ ಅನುಕೂಲತೆಯ ಪ್ರಕಾರ ಮರಣೋತ್ತರ ಪರೀಕ್ಷೆ ಕೈಗೊಳ್ಳಲು ಆಸ್ಪತ್ರೆಯ ಮುಖ್ಯಸ್ಥರಿಗೆ ನಿರ್ದೇಶಿಸಲಾಗಿದೆ.

ಟಿರಾದ ತಾಲ್ಲೂಕಿನಲ್ಲಿ ಖಾಲಿ ಇರುವ ಬಿ.ಇ.ಓ ಹುದ್ದೆಗಳನ್ನು ತುಂಬುವುದು

4073 (4739) : ಶ್ರೀ ಗುಂಡಪ್ಪ ವಕೀಲ್ (ಟಿರಾದ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಟಿರಾದ ತಾಲ್ಲೂಕಿನಲ್ಲಿ ಸುಮಾರು 1 ವರ್ಷದಿಂದ ಬಿಒಓ ಹುದ್ದೆ ಖಾಲಿ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹುದ್ದೆಯನ್ನು ತುಂಬಲು ಮಾನ್ಯ ಮುಖ್ಯಮಂತ್ರಿಗಳ ಆದೇಶ ನೀಡಿದ್ದರೂ ತುಂಬದಿರಲು ಕಾರಣವೇನು;

ಇ) ಈಗಲಾದರೂ ಬಿ.ಇ.ಓ ಸ್ಥಾನ ತುಂಬಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಪ್ರೊ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಹೌದು. ಆದರೆ ಸೂಕ್ತ ಅಧಿಕಾರಿಯನ್ನು ಪ್ರಭಾರದಲ್ಲಿರಿಸಿದೆ.

ಆ) ಆಡಳಿತಾತ್ಮಕ

ಇ) ಕ್ರಮ ಕೈಗೊಳ್ಳಲಾಗುವುದು.

ಟಿರಾದ್ ತಾಲ್ಲೂಕ ಕಮಲನಗರ ಹೋಬಳಿಯ ಸರ್ಕಾರಿ ಆಸ್ಪತ್ರೆಯ ಕಾಮಗಾರಿಯನ್ನು ಪೂರ್ಣಮಾಡುವುದು

4074 (4740) : ಶ್ರೀ ಗುಂಡಪ್ಪ ವಕೀಲ್ (ಟಿರಾದ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಟಿರಾದ್ ತಾಲ್ಲೂಕಿನ ಕಮಲನಗರ ಹೋಬಳಿ ಗ್ರಾಮದಲ್ಲಿ 30 ಬೆಡ್ ಆಸ್ಪತ್ರೆ ಸಲುವಾಗಿ 42.00 ಲಕ್ಷ ರೂ. ವೆಚ್ಚದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾರ್ಯ ಜಿಲ್ಲಾ ಪಂಚಾಯತಿ ವತಿಯಿಂದ ಕೈಗೊಂಡು ಅರ್ಧದಲ್ಲಿಯೇ ಕೆಲಸ ಸ್ಥಗಿತಗೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಟಿರಾದ್ ತಾಲ್ಲೂಕಿನ ಕಮಲಾನಗರ ಹೋಬಳಿ ಗ್ರಾಮದಲ್ಲಿ 30 ಹಾಸಿಗೆ ಆಸ್ಪತ್ರೆ ಕಟ್ಟಡದ ನಿರ್ಮಾಣವನ್ನು 2001–2002ನೇ ಸಾಲಿನಲ್ಲಿ 48.90 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕಾಮಗಾರಿ ಪ್ರಾರಂಭಿಸಲಾಗಿದ್ದು ಇಲ್ಲಿಯವರೆಗೂ 11.35 ಲಕ್ಷ ಖರ್ಚಾಗಿದ್ದು ಕಾಮಗಾರಿ ಸದ್ಯ ಚಾಲ್ತಿಯಲ್ಲಿರುತ್ತದೆ.

ಆ) ಉದ್ಭವಿಸುವುದಿಲ್ಲ.